**ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ**
**ದಂಡಾಧಿಕಾರಿಗಳ ನ್ಯಾಯಾಲಯ, ದಾಂಡೇಲಿ.**

**ಸಿ.ಸಿ ನಂ. 590/2024**

**ಚಾಸಾ- 22**

**ಪ್ರಾಸಾ-06**

**ದಿನಾಂಕಃ 22-06-2026 ರಂದು ಸತ್ಯ ಪ್ರತಿಜ್ಞೆ ಮೇಲೆ ಸಾಕ್ಷಿಗೆ ಪ್ರಮಾಣ ವಚನವನ್ನು ಭೋಧಿಸಲಾಯಿತು .**

| | |
|---|---|
| ಹೆಸರು | ಃ ಚಂದ್ರಶೇಖರ ತಂಃ ನಾಗಪ್ಪ ಹರಿಹರ |
| ವಯಸ್ಸು | ಃ 47 ವರ್ಷ |
| ಉದ್ಯೋಗ | ಃ ಪೊಲೀಸ್ ವೃತ್ತ ನೀರಿಕ್ಷಕರು, ಜೋಯಿಡಾ. |
| ವಾಸ | ಃ ರಾಮನಗರ |

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದ.**

1. ನಾನು 02-01-2024 ರಿಂದ ಇಲ್ಲಿಯವರೆಗೆ ಜೊಯಿಡಾ ವೃತ್ತದಲ್ಲಿ ಪೋಲಿಸ ವೃತ್ತ ನೀರಿಕ್ಷಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೆನೆ.

2. ದಿಃ 04-02-2024 ರಂದು ಈ ಪ್ರಕರಣದ ಕಡತವನ್ನು ಚಾಸಾ-20 ರವರಿಂದ ಪಡೆದು, ಮುಂದಿನ ತನಿಖೆಯನ್ನು ಕೈಗೊಂಡಿರುತ್ತೇನೆ. ದಿಃ 04-02-2024 ರಂದು ಆರೋಪಿಯು ನನ್ನ ಸಮಕ್ಷಮ ಖುದ್ದಾಗಿ ಹಾಜರಾಗಿದ್ದು ಅವರ ವಿರುದ್ದ ದಸ್ತಗೀರಿ ಕ್ರಮ ಜರುಗಿಸಿ, ವಿಚಾರಣೆ ಮಾಡಿ ಸೂಕ್ತ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ.

3. ಮರುದಿನ ಅಪಘಾತದಲ್ಲಿ ಬಾಗಿಯಾದ ದ್ವಿಚಕ್ರ ವಾಹನ ಸಂಖ್ಯೆಃ ಕೆಎ-24 ವಾಯ 3795 ನೇದ್ದರ ಮಾಲೀಕನಾದ ಚಾಸಾ 12 ರವರಿಗೆ ಕಲಂ 133 ರಡಿಯಲ್ಲಿ ನೋಟಿಸ ನೀಡಿ, ಅವರಿಂದ ಉತ್ತರ ಪಡೆದು, ಅವರ ಹೇಳಿಕೆ ಪಡೆದು ಅವರಿಂದ ನಷ್ಟ ಭರ್ತಿ ಪತ್ರ ಪಡೆದು ಬಿಡುಗಡೆ ಮಾಡಿರುತ್ತೇನೆ.

4. ದಿಃ 10-02-2024 ರಂದು ಅಪಘಾತದಲ್ಲಿ ಭಾಗಿಯಾದ ಕೆಎ-30 ಜೆ -3028 ನೇದ್ದರ ಮಾಲೀಕನಾದ ಚಾಸಾ 11 ರವರಿಗೆ ಕಲಂ. 133 ರಡಿಯಲ್ಲಿ ನೋಟಿಸ ನೀಡಿ, ಅವರಿಂದ ಉತ್ತರ ಪಡೆದಿರುತ್ತೇನೆ. ಆದರೆ ಸದರಿ ವಾಹನಕ್ಕೆ ವಿಮೆ ಇಲ್ಲದ ಕಾರಣ ಸದರಿ ವಾಹನದ ವಿವರಗಳನ್ನು ಮಾಲು ಪಟ್ಟಿ ಸಂಖ್ಯೆ 11/2024 ರಲ್ಲಿ ನಮೂದಿಸಿ ನ್ಯಾಯಾಲಯಕ್ಕೆ

ಸಲ್ಲಿಸಿರುತ್ತೇನೆ. ದಿಃ 05-03-2024 ರಂದು ಅಪಘಾತದಲ್ಲಿ ಗಾಯಗೊಂಡ ಆರೋಪಿ ಮತ್ತು ಚಾಸಾ 6 ರವರ ಗಾಯದ ಪ್ರಮಾಣ ಪತ್ರವನ್ನು ಪಡೆದಿರುತ್ತೇನೆ. ಅದೇ ದಿನ ಚಾಸಾ 16 ಮತ್ತು 19 ರವರಿಂದ ವರದಿಯನ್ನು ಪಡೆದಿರುತ್ತೇನೆ. ಅದೇ ದಿನ ಚಾಸಾ 17 ಮತ್ತು 18 ರವರಿಂದ ಕಲಂ 65 ಬಿ ನ ಪ್ರಮಾಣ ಪತ್ರಗಳನ್ನು ಪಡೆದಿರುತ್ತೇನೆ.

5. ಅದೇ ದಿನ ತನಿಖೆಯನ್ನು ಪೂರ್ಣಗೊಳಿಸಿ, ಆರೋಪಿಯ ವಿರುದ್ದ ಸಾಕಷ್ಟು ಸಾಕ್ಷ್ಯಾಧಾರಗಳು ಕಂಡು ಬಂದ ಕಾರಣ, ಆತನ ವಿರುದ್ದ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿರುತ್ತೇನೆ.

6. ಸಾಕ್ಷಿಯು ಅಪಘಾತದಲ್ಲಿ ಭಾಗಿಯಾದ ದ್ವಿಚಕ್ರ ವಾಹನ ಸಂಖ್ಯೆಃ ಕೆಎ-24 ವಾಯ 3795 ನೇದರ ಮಾಲೀಕರಿಗೆ ನೀಡಿದ ನೋಟಿಸನ್ನು, ಅವರ ನೀಡಿದ ಉತ್ತರವನ್ನು ಮತ್ತು ನಷ್ಟ ಭರ್ತಿ ಪತ್ರವನ್ನು ನೋಡಿ ಗುರತಿಸಿದ್ದು ಅವುಗಳನ್ನು ಈಗಾಗಲೇ ಆರೋಪಿ ಪರ ವಕೀಲರ ಸಹಮತಿಯೊಂದಿಗೆ **ನಿಪಿ 12** ರಿಂದ **ನಿಪಿ 14** ಎಂದು ಗುರುತಿಸಲಾಗಿದೆ.

7. ಸಾಕ್ಷಿಯು ಅಪಘಾತದಲ್ಲಿ ಭಾಗಿಯಾದ ಕೆಎ-30 ಜೆ -3028 ನೇದ್ದರ ಮಾಲೀಕರಿಗೆ ನೀಡಿದ ನೋಟಿಸನ್ನು ನೋಡಿ ಗರುತಿಸಿದ್ದು ಅದನ್ನು ನಿಪಿ 15 ಎಂದು ಗುರುತಿಸಲಾಯಿತು. ಅದರಲ್ಲಿರುವ ಸಾಕ್ಷಿ ಸಹಿಯನ್ನು ನಿಪಿ 15-ಎ ಎಂದು ಗುರುತಿಸಲಾಯಿತು.

8. ಸಾಕ್ಷಿಯು ಅಪಘಾತದಲ್ಲಿ ಭಾಗಿಯಾದ ಕೆಎ-30 ಜೆ -3028 ನೇದ್ದರ ಮಾಲೀಕರು ನೀಡಿದ ಉತ್ತರವನ್ನು ನೋಡಿ ಗರುತಿಸಿದ್ದು ಅದನ್ನು **ನಿಪಿ 16** ಎಂದು ಗುರುತಿಸಲಾಯಿತು. ಅದರಲ್ಲಿರುವ ಸಾಕ್ಷಿ ಸಹಿಯನ್ನು ನಿಪಿ **16-ಎ** ಎಂದು ಗುರುತಿಸಲಾಯಿತು.

9. ಸಾಕ್ಷಿಯು ಕಲಂ 65 ಬಿ ರಡಿಯಲ್ಲಿನ ಎರಡು ಪ್ರಮಾಣ ಪತ್ರಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗ **ನಿಪಿ-17** ಮತ್ತು **ನಿಪಿ 18** ಎಂದು ಗುರುತಿಸಲಾಯಿತು. ಅವುಗಳಲ್ಲಿರುವ ಸಾಕ್ಷಿ ಸಹಿಗಳನ್ನು ಅನುಕ್ರಮವಾಗಿ ನಿಪಿ **17-ಎ** ಮತ್ತು ನಿಪಿ **18-ಎ** ಎಂದು ಗುರುತಿಸಲಾಯಿತು.

10. ಸಾಕ್ಷಿಯು ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ. ಎಂ ಎಸ್ ಪಿ ವಕೀಲರಿಂದ</u>**

11. ನನ್ನ ತನಿಖೆಯಲ್ಲಿ ಆರೋಪಿ ಯಾವುದೇ ತಪ್ಪು ಇಲ್ಲದಿರುವ ಬಗ್ಗೆ ಗಮನಕ್ಕೆ ಬಂದರೂ ಸಹಿತ ಆರೋಪಿಯ ವಿರುದ್ಧ ಸುಳ್ಳು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೆನೆ ಎಂದರೆ ಸರಿಯಲ್ಲ. ಅಪಘಾತದಲ್ಲಿ ಭಾಗಿಯಾದ ಕೆಎ-30 ಜೆ-3028 ನೇದ್ದರ ಮಾಲೀಕರು ಚಾಸಾ 11 ರವರಾಗಿದ್ದು ಆದರೆ ಅಪಘಾತವಾದ ದಿನ ಅದನ್ನು ಅಪಘಾೆತದಲ್ಲಿ ಮರಣ ಹೊಂದಿದ ವ್ಯಕ್ತಿ ಚಲಾಯಿಸುತ್ತಿದ್ದ ಎಂದರೆ ಸರಿ. ಅಪಘಾತದಲ್ಲಿ ಮರಣ ಹೊಂದಿದ ವ್ಯಕ್ತಿಯು ವಾಹನದ ಚಾಲಾನಾ ಪರವಾನಿಗೆ ಪತ್ರ ಹೊಂದಿರಲಿಲ್ಲ ಎಂದರೆ ಸರಿ. ಅದರಂತೆ ಅಪಘಾತದಲ್ಲಿ ಭಾಗಿಯಾದ ಕೆಎ-30 ಜೆ-3028 ವಾಹನಕ್ಕೆ ವಿಮೆ  ಕೂಡಾ ಇರಲಿಲ್ಲ ಎಂದರೆ ಸರಿ. ಅದರಂತೆ ನಿಪಿ 16 ರಲ್ಲಿ ಕಂಡು ಬರುತ್ತದೆ ಎಂದರೆ ಸರಿ.  ಅಪಘಾತದಲ್ಲಿ ಮರಣ ಹೊಂದಿದ ವ್ಯಕ್ತಿಯು ತನಗೆ ವಾಹನ ಚಾಲನೆ ಬರದೇ ಇದ್ದರೂ, ತನ್ನ ಹತ್ತಿರ ವಾಹನ ಚಾಲನಾ ಪರವಾನಿಗೆ ಪತ್ರ ಇರದೇ ಇದ್ದರೂ, ತಾನು ಚಲಾಯಿಸುತ್ತಿದ್ದ ವಾಹನಕ್ಕೆ  ವಿಮೆ  ಇಲ್ಲದೆ ಇರುವ  ವಿಷಯ ಗೊತ್ತಿದ್ದರೂ, ತನ್ನ ತಪ್ಪಿನಿಂದಲೇ ಅಪಘಾತಪಡಿಸಿಕೊಂಡಿದ್ದರೂ ಸಹಿತ, ಅವರ ಕುಟುಂಬಕ್ಕೆ ಸಹಾಯ ಮಾಡಲು  ಅಪಘಾತಕ್ಕೆ ಆರೋಪಿಯ ತಪ್ಪು ಇಲ್ಲದೇ ಇದ್ದರೂ ಆರೋಪಿಯ ವಿರುದ್ಧ ಸುಳ್ಳು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ. ನಾನು ಚಾಸಾ 17 ಮತ್ತು 18 ರವರಿಂದ ಪ್ರಮಾಣ ಪತ್ರವನ್ನು ಮತ್ತು ಚಾಸಾ 16 ಮತ್ತು ಚಾಸಾ 19 ರವರಿಂದ ಹೇಳಿಕೆಯನ್ನು ಪಡೆದಿದ್ದೆನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ.  ಸದರಿ ಅಪಘಾತಕ್ಕೆ ಆರೋಪಿಯ ಯಾವುದೇ ತಪ್ಪು ಇರುವುದಿಲ್ಲವೆಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಾ.**

**( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ. ಸರಿ ಇದೆ**

**ಸಹಿ ಇದೆ**

**(ತೇಜಸ್ವಿನಿ ಸೊಗಲದ)**

**ದಿವಾಣಿ ನ್ಯಾಯಾಧೀಶರು ಮತ್ತು**

**ಪ್ರ.ದ.ನ್ಯಾ. ದಂಡಾಧಿಕಾರಿಗಳು,**

**ದಾಂಡೇಲಿ.**